KATK010039232023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ ಸಂಖ್ಯೆ.474/2023**

ಪ್ರಾ.ಸಾ. ಃ **10**

ದೋ.ಸಾ. ಃ **9**

**ದಿ.08.06.2026.**

| | |
|---|---|
| ಹೆಸರು | ಃ ಗದ್ಯಪ್ಪ |
| ತಂದೆಯ ಹೆಸರು | ಃ ಬಸಪ್ಪ |
| ವಯಸ್ಸು | ಃ **16** ವರ್ಷ |
| ಉದ್ಯೋಗ | ಃ ಕುರಿ ಕಾಯುವ ಕೆಲಸ |
| ವಾಸಸ್ಥಳ | ಃ ಕರ್ಕೆರೆ ಗ್ರಾಮ, ಸುರಪುರ ತಾಲ್ಲೂಕು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು 6 ನೇ ತರಗತಿಯವರೆಗೆ ತುಮಕೂರು ತಾಲ್ಲೂಕಿನ ಮಲ್ಲಸಂದ್ರ ಗ್ರಾಮದಲ್ಲಿರುವ ಶ್ರೀ ವಿಶ್ವಭಾರತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಶಾಲೆಯಲ್ಲಿ ಮಲ್ಲಮ್ಮ ಎಂಬ ಟೀಚರ್ ಇದ್ದರು. ಆ ಸಮಯದಲ್ಲಿ ನಾನು ಶ್ರೀ ವಿಶ್ವಭಾರತಿ ಶಾಲೆಯ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಂಡಿದ್ದೆನು. ನನಗೆ ಆರೋಪಿ ಗೊತ್ತು. ಮಲ್ಲಮ್ಮ ಹಾಸ್ಟೆಲ್ ನೋಡಿಕೊಳ್ಳುತ್ತಿದ್ದರು. ಆರೋಪಿ ನನಗೇನೂ ಮಾಡಿಲ್ಲ. ಬೇರೆ ಮಕ್ಕಳಿಗೆ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹಲ್ಲೆ ಮಾಡಿದ್ದು ನನಗೆ ಗೊತ್ತಿಲ್ಲ. ನನಗೆ ಕಬಡ್ಡಿ ಆಡಿ ಗಾಯವಾಗಿತ್ತು, ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನಾನು ಈ ಹಿಂದೆ ನ್ಯಾಯಾಲಯಕ್ಕೆ ಬಂದಿದ್ದೇನೆ. ನ್ಯಾಯಾಧೀಶರ ಏನು ಹೇಳಿಕೆ ಕೊಟ್ಟಿದ್ದೇನೆಂದು ನೆನಪಿಲ್ಲ. ಈಗ ನನಗೆ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಆ ಹೇಳಿಕೆಯನ್ನು ನಿಶಾನೆ ಪಿ38 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ38(ಎ) ಎಂದು ಗುರುತಿಸಲಾಯಿತು.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ದಿನಾಂಕ 21.11.2022 ರಂದು ರಾತ್ರಿ 9.00 ಗಂಟೆಗೆ ನಮ್ಮ ಶಾಲೆಯ ಮಲ್ಲಮ್ಮ ಮಿಸ್ ಹಾಸ್ಟೆಲ್ ನಲ್ಲಿದ್ದ ನಮ್ಮೆಲ್ಲರಿಗೂ ಊಟ ಹಾಕಿ ಮನೆಗೆ ಹೋದರು ಎಂದರೆ ಸರಿಯಲ್ಲ. ಅನಂತರ ನಾವು ರೂಮುಗಳಲ್ಲಿ ಮಲಗಿಕೊಂಡೆವು ಎಂದರೆ ಸರಿಯಲ್ಲ. ರಾತ್ರಿ 10.30 ಗಂಟೆಗೆ ಆರೋಪಿ ಭರತ್ ರವರು ಮಲಗಿಕೊಂಡಿದ್ದ ನಮ್ಮ ರೂಮ್ ಗಳಿಗೆ ಬಂದು ನಮ್ಮನ್ನು ಎಬ್ಬಿಸಿ ಸಾಲಾಗಿ ನಿಲ್ಲಿಸಿದರು ಎಂದರೆ ಸರಿಯಲ್ಲ. ಯಾಕರೋ ಇಷ್ಟು ಬೇಗ ಮಲಗಿದ್ದೀರಾ, ನಾನು ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಹೇಳಿ ತೆಂಗಿನ ಎಡಮಟ್ಟೆಯಿಂದ ಮತ್ತು ಬೆಲ್ಟ್ ನಿಂದ ಹೊಡೆದರು ಎಂದರೆ ಸರಿಯಲ್ಲ. 16 ಜನರಿಗೆ ಜಾಸ್ತಿ ಪೆಟ್ಟುಗಳು ಬಿದ್ದಿದ್ದವು ಎಂದರೆ ಸರಿಯಲ್ಲ. ನನ್ನ ಬಲಕಾಲಿನ ತೊಡೆಗೆ ಪೆಟ್ಟು ಬಿದ್ದಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ39 ಎಂದು ಗುರುತಿಸಲಾಯಿತು.
2. ನಂತರ ತುಮಕೂರಿನ 3 ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಈ ಘಟನೆಯ ಬಗ್ಗೆ ಹೇಳಿಕೆ ನೀಡಿ, ಅದನ್ನು ಓದಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನನಗೆ ನ್ಯಾಯಾಧೀಶರು ಏನಾದರೂ ಒತ್ತಡ ಇದೆಯೇ ಎಂದು ಕೇಳಿದರು ಎಂದರೆ ನನಗೆ ನೆನಪಿಲ್ಲ. ನನಗೆ ಯಾವುದೇ ಒತ್ತಡ ಇಲ್ಲವೆಂದು

ನ್ಯಾಯಾಧೀಶರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಶಾಲೆಯಲ್ಲಿ ಓದಿದ್ದರಿಂದ ಅವರನ್ನು ಈ ಕೇಸಿನಿಂದ ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :**

ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು